**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 698/2025 **RW**-1

**ದಿಃ03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 1 ನೇ ಎದುರುದಾರ ಪರ ವಕೀಲರಾದ ಶ್ರೀ ಎಲ್ ಎಚ್ ಐ ರವರಿಂದ.**

ನಾನು ಈ ಅರ್ಜಿಯಲ್ಲಿ 1 ನೇ ಎದುರುದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ತಕರಾರಿಗೆ ಸಂಬಂಧಿಸಿದಂತೆ ಪಾಲಿಸಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಆರ 1 ಎಂದು, ನೋಟರಿಯವರು ದೃಢೀಕರಿಸಿದ ಡಿಎಲ್ ಹಾಗೂ ಆರ ಸಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆ ಆರ 2 ಮತ್ತು ನಿಶಾನೆ ಆರ 3 ಎಂದು,

**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀಮತಿ ಪಿ ಆರ ಬಿ ರವರಿಂದ.**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೆ ಕೊಟ್ಟಿರುತ್ತೇನೆ. ದೋಷಾರೋಪಣೆ ಪಟ್ಟಿಯಲ್ಲಿ ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದು ಬರೆದಿದ್ದಾರೆಂದರೆ ಸಾಕ್ಷಿ ಅವರು ಆ ರೀತಿ ಬರೆದಿದ್ದಾರೆ ಆದರೆ ಅಪಘಾತ ನನ್ನ ತಪ್ಪಿನಿಂದ ಆಗಿಲ್ಲ ಎನ್ನುತ್ತಾರೆ. ಮೃತ ವ್ಯಕ್ತಿ ರಸ್ತೆ ಬದಿಯಲ್ಲಿ ನಿಂತಿದ್ದು ಆ ಸಮಯದಲ್ಲಿ ನಾನು ವೇಗವಾಗಿ ಬಂದು ಅವರಿಗೆ ಅಪಘಾತಪಡಿಸಿರುತ್ತೇನೆಂದು ಬರೆದಿದ್ದಾರೆಂದರೆ ಸಾಕ್ಷಿ ಅದು ಸುಳ್ಳು ಇದೆ ಎಂದು ನುಡಿಯುತ್ತಾರೆ. ಸದರಿ ದೋಷಾರೋಪಣೆ ಪಟ್ಟಿಯಲ್ಲಿ ಬರೆದಿರುವುದು ತಪ್ಪು ಇದೆ ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಕೆಳಗಿನ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು ನಾನು ಆ ರೀತಿ ಹೇಳಿದ್ದೇನೆಂದು ನುಡಿಯುತ್ತಾರೆ. ಅಪಘಾತವಾದ ದಿನ ನನ್ನದು ತಪ್ಪು ಇಲ್ಲ ಎಂದು ನೀವು ಪೋಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಕೆಂದರೆ ನನಗೂ ಸಹ ಪೆಟ್ಟಾಗಿತ್ತು ನಾನು ಐಸಿಯುನಲ್ಲಿ ಇದ್ದೆ ಆ ಕಾರಣಕ್ಕೆ ಕೊಡಲಿಕ್ಕೆ ಆಗಿಲ್ಲ ಎನ್ನುತ್ತಾರೆ. ಪೋಲೀಸರು ಅಪಘಾತವಾದ ದಿನವೆ ನನ್ನ ವಾಹನವನ್ನು ತೆಗೆದುಕೊಂಡು ಹೋಗಿದ್ದರು.

ನಾನು ಆಸ್ಪತ್ರೆಯಲ್ಲಿ ಒಂದು ವಾರದ ಮೇಲೆ ದಾಖಲಾಗಿದೇನು. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಆದರೆ ದಾಖಲೆ ಇದೆ ಎನ್ನುತ್ತಾರೆ. ನನಗೆ ಯಾವುದೇ ಗಾಯಗಳು ಆಗಿಲ್ಲದ ಕಾರಣ ನಾನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಎಫಐಆರ ನಲ್ಲಿ ನನಗೆ ಸಣ್ಣ ಪುಟ್ಟ ಗಾಯಗಳಾಗಿದೆ ಎಂದು ಬರೆದಿದ್ದಾರೆಂದರೆ ಸಾಕ್ಷಿ JAW bone ಮುರಿದಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಡಿಸಚಾರ್ಜ ಆದ ನಂತರ ಪೋಲೀಸರಿಗೆ ನನ್ನ ತಪ್ಪು ಇಲ್ಲ ಎಂದು ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮಾಡಿರಬಹುದು ಇಲ್ಲದಿದ್ದಲ್ಲಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಾನು ಹೇಳಿಕೆ ಕೊಟ್ಟಿಲ್ಲದ ಕಾರಣ ನಾನು ಅದನ್ನು ಹಾಜರುಪಡಿಸಿಲ್ಲ ಆದರೆ ನ್ಯಾಯಾಲಯಕ್ಕೆ ಬಂದು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ದೂರು ಯಾರು ಕೊಟ್ಟಿದ್ದಾರೆಂದು ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ದೂರು ಕೊಟ್ಟವರು ಮೃತನ ಮಗ ಎಂದು ಇದೆ ಎಂದರೆ ಸರಿ. ಸದರಿ ದೂರು ಕೊಟ್ಟವರು ಮೃತನ ಮಗ ಅಲ್ಲ ಎಂದು ಮತ್ತು ಅವರಿಗೆ ಯಾವುದೆ ಸಂಬಂಧ ಇಲ್ಲ ಎಂದು ಪೋಲೀಸ ಠಾಣೆಯಲ್ಲಿ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾವು ಈ ಬಗ್ಗೆ ಇನಕ್ವೇರಿ ಮಾಡಿದ್ದು ಆ ನಂತರ ಆತ ಮಗ ಎಂದು ಗೊತ್ತಾದ ಮೇಲೆ ದೂರು ಕೊಟ್ಟಿಲ್ಲ ಎಂದರೆ ಸಾಕ್ಷಿ ಆ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಪ್ಪು ಸಂಪೂರ್ಣವಾಗಿ ಈ ಅಪಘಾತದಲ್ಲಿ ಇರುವ ಕಾರಣ ನಾನು ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥನು ಇರುತ್ತೇನೆಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಡಿಎಲ್ ಹಾಗೂ ಇನ್ಸೂರನ್ಸ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ತಪ್ಪು ಮಾಹಿತಿ ನೀಡಿದ್ದೇನೆ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಅವಶ್ಯಕತೆ ಇದ್ದಲ್ಲಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಎಂ ವೈ ಎ ರವರಿಂದ.**

ಆ ದಿನ ಗಾಡಿಯಲ್ಲಿ ನಾನು ಒಬ್ಬನೆ ಇದ್ದೇನು ಎಂದರೆ ಸರಿ. ಸದರಿ ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿ. ನಾನು ಸರಿಯಾಗಿ ಹೊರಟ್ಟಿದ್ದು ಮೃತ ಮಹಿಳೆ ಬಂದು ನನ್ನ ಗಾಡಿಗೆ ಹಾಯ್ದುಳು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆಕೆ sudden ಆಗಿ



ಬರಲಿಲ್ಲ ಎಂದಿದ್ದರೆ ಅಪಘಾತವಾಗುತ್ತಿರಲಿಲ್ಲವೆಂದರೆ ಸರಿ. ಅಪಘಾತ ಸಂಪೂರ್ಣವಾಗಿ ಮರಣ ಹೊಂದಿದ ವ್ಯಕ್ತಿಯ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿ. ನಿಶಾನೆ ಆರ 2 ರ ಪ್ರಕಾರ ನನ್ನ ಡಿಎಲ್ ದಿಃ02-07-2025 ರಿಂದ ಪ್ರಾರಂಭವಾಗಿದೆ ಎಂದರೆ ಸರಿ. ಅಪಘಾತವಾದ ದಿನ ನನ್ನ ಬಳಿ ಡಿಎಲ್

ಇರಲಿಲ್ಲವೆಂದರೆ ಸಾಕ್ಷಿ ಎಲ್ ಎಲ್ ಆರ ಇತ್ತು ಎನ್ನುತ್ತಾರೆ. ಎಲ್ ಎಲ್ ಆರ ನಲ್ಲಿ ಯಾವುದೇ ರೀತಿಯ ಸೀಲ್ ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿ ಅದು online generated copy ಎನ್ನುತ್ತಾರೆ. ಎಲ್ ಎಲ್ ಆರ ಪ್ರಕಾರ ಗಾಡಿ ಚಾಲನೆ ಮಾಡಬೇಕೆಂದರೆ ಹಿಂದೆ ಲೈಸನ್ಸ ಇದ್ದವರನ್ನು ಕೂಡ್ರಿಸಿಕೊಂಡು ಗಾಡಿ ಚಾಲನೆ ಮಾಡಬೇಕೆಂದರೆ ಸಾಕ್ಷಿ ಹೌದು ಎನ್ನುತ್ತಾರೆ ಮತ್ತು ಕಾನುನ ಪ್ರಕಾರ ಗಾಡಿಯ ಹಿಂದೆ ಮತ್ತು ಮುಂದೆ ಒಂದು ಬೋರ್ಡ ಹಾಕಬೇಕೆಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಕಾನೂನು ಪ್ರಕಾರ ಎಲ್ ಬೋರ್ಡ ಹಾಕಿರಲಿಲ್ಲವೆಂದರೆ ಸಾಕ್ಷಿ ಹಾಕಿಲ್ಲ ಎನ್ನುತ್ತಾರೆ. ಈ ಎರಡನ್ನು ನಾನು ಆ ದಿನ ಪಾಲಿಸಿಲ್ಲವೆಂದರೆ ಸಾಕ್ಷಿ ನನಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ನಾನು ಆ ದಿನ ಕಾನೂನನ್ನು ಉಲ್ಲಂಘನೆ ಮಾಡಿ ಗಾಡಿ ಚಾಲನೆ ಮಾಡಿದ್ದರಿಂದ ಪರಿಹಾರ ಕೊಡಲು ನಾನೆ ಬಾಧ್ಯಸ್ಥ ಎಂದರೆ ಸರಿಯಲ್ಲ. ನನ್ನ ಹತ್ತಿರ ಚಾಲನೆ ಪರಿವಾನಿಗೆ ಇರಲಿಲ್ಲ  ಆದರು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾನು ಪಾಲಿಸಿಯ ಷರತ್ತುಗಳನ್ನು ಉಲ್ಲಂಘಿಸಿರುವ ಕಾರಣ ನಾನೇ ಪರಿಹಾರ ಕೊಡಲು ಬಾಧ್ಯಸ್ಥನು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ